ಶ್ರೀ ಎಂ. ಎಸ್. ಪಟ್ಟಣ್.—ನನ್ನ (ಬ) ಪ್ರಶ್ನೆಗೆ ಉತ್ತರವಾಗಿ ನಾಲೆಗಳನ್ನು ತೋಡುವುದರಲ್ಲಿ ಹೆಚ್ಚು ವಿಳಂಬವೇನೂ ಆಗಿಲ್ಲವೆಂದು ಹೇಳಿದೆ. ಕಾಲುವೆಗಳು ತಯಾರಾಗಿವೆ ಎಂದು ಹೇಳುತ್ತಾರೆ. ಹಾಗಾದರೆ ನೀರನ್ನು ಇದುವರೆಗೂ ಅಲ್ಲಿನ ನಿವಾಸಿಗಳಿಗೆ ಏತಕ್ಕೆ ಕೊಡಲಿಲ್ಲ?

*ಶ್ರೀ ಎಚ್. ಕೆ. ವೀರಣ್ಣಗೌಡ.—ನೀರು ಏತಕ್ಕೆ ಕೊಡಲಿಲ್ಲ ಎಂಬ ಪ್ರಶ್ನೆಯನ್ನು ಕೇಳಿಲ್ಲ. ಅದಕ್ಕೆ ನೋಟೀಸ್ ಬೇಕು. ಈಗ ಹತ್ತು ಮೈಲಿ ದೂರ ಕಾಲುವೆ ತಯಾರಾಗಿದೆ.

ಶ್ರೀ ಎಂ. ಎಸ್. ಪಟ್ಟಣ್.—ಕಾಲುವೆಗಳನ್ನು ತೋಡುವ ಬಗ್ಗೆ ಸಂಪಾದಿಸಲಾದ ಭೂಮಿಗಳ ಮಾಲೀಕರಿಗೆ ಇನ್ನೂ ಪರಿಹಾರವನ್ನು ಏಕೆ ಕೊಡಲಿಲ್ಲ?

ಶ್ರೀ ಎಚ್.ಕೆ. ವೀರಣ್ಣಗೌಡ.—ಭೂಸಂಪಾದನೆಯ ಆಫೀಸರಿಂದ ಪೂರ್ಣವರದಿ ಬಂದ ತಕ್ಷಣ ಪರಿಹಾರವನ್ನು ಕೊಡಲಾಗುತ್ತದೆ.

ಶ್ರೀ ಎಂ. ಎಸ್. ಪಟ್ಟಣ್.—ಆ ತಾಲ್ಲೂಕಿನ ಜನಗಳು ಎರಡು-ಮೂರು ವರ್ಷಗಳಿಂದಲೂ ಪರಿಹಾರ ಸಿಕ್ಕಲಿಲ್ಲ ಎಂಬುದಾಗಿ ಏನಾದರೂ ಅರ್ಜಿಗಳನ್ನು ಕಳುಹಿಸಿದ್ದಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ವಿಚಾರಿಸಿ ನೋಡುತ್ತೇನೆ.

Sri G. B. SHANKARA RAO.—Supplementary to (*b*): is there no unreasonable delay, Sir?

Sri H. K. VEERANNA GOWDH.—There is no unreasonable delay.

Misappropriation of articles in the Agricultural Depot, Tumkur.

Q.—385. **Sri G. N. PUTTANNA** (Tumkur).—

Will the Government be pleased to state :—

(*a*) whether it is a fact that articles meant for sale belonging to the Agricultural Depot at Tumkur worth nearly Rs. 30,000 have been misappropriated;

(*b*) whether it is a fact that an enquiry was made some time ago in this matter ;

(*c*) the persons who enquired into the matter ;

(*d*) the names of the persons that are responsible for misappropriation of such huge amount of money ;

(*e*) the action taken by them against the persons responsible for accounting these articles ?

A.—**Sri H. S. RUDRAPPA** (Minister for Agriculture).—

(*a*) A shortage to the tune of Rs. 34,800 is found out on investigation in the Agricultural materials like Ammonium Sulphate, seeds, chemicals handled from the inception of the Central Godown in the year 1949-50. Out of this it is to be found out how much is due to the natural causes such as driage, transit and handling. Therefore it is premature to say whether it is misappropriation or not.

(*b*) Enquiries about the shortages have been instituted both by the office of the Special Officer, Efficiency Audit, and by the Department.

(*c*) *Vide* reply to (*b*) above.

(*d*) The Agricultural Inspectors Sriyuths G. S. Rangaswamy Iyengar and M. Chikka Madaiah were in charge of the depot.

(*e*) No action is taken since the investigation is not finalised.

ಶ್ರೀ ಜಿ. ಎಸ್. ಪುಟ್ಟಣ್ಣ.—1949-50ನೇ ಸಾಲಿನಲ್ಲಿ ತುಮಕೂರಿನಲ್ಲಿರುವ ಕೇಂದ್ರ ಉಗ್ರಾಣವು ಪ್ರಾರಂಭವಾದಂದಿನಿಂದ ವ್ಯವಸಾಯದ ಡಿಪೋಗಳಿನಲ್ಲಿ ಕೆಲವು ಸಾಮಗ್ರಿಗಳಲ್ಲಿ 34,800 ರೂಪಾಯಿಗಳಷ್ಟು ಕಡಮೆ ಬಂದಿದೆಯೆಂದು ಒಂದು ಕಡೆಯಲ್ಲಿ ಉತ್ತರ ಹೇಳಿದ್ದೀರಿ. ಇನ್ನೊಂದು ಕಡೆಯಲ್ಲಿ ಕೆಲವು ವ್ಯವಸಾಯದ ಸಾಮಗ್ರಿಗಳು ಒಣಗಿ ಹೋಗುವುದು, ಅವುಗಳ ಸಾಗಾಣಿಕೆ ಮತ್ತು ಅವುಗಳ ಬೆಲೆಗಳ ಏರಿಳಿಸುವಿಕೆ—ಈ ಮೂರು ನೈಸರ್ಗಿಕ ಕಾರಣಗಳಿಂದ ಕಡಮೆಯಾಗಿದೆ ಎಂದು ಉತ್ತರ ಹೇಳುತ್ತೀರಿ. ಹೀಗಿರುವುದರಿಂದ ಇದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ಈ ಮೂರು ಕಾರಣಗಳಿಂದಾಗಿವೆಯೆಂದು ಹೇಳುತ್ತೀರೋ ಅಥವಾ ಒಂದು ಕಾರಣದಿಂದ ಈ ರೀತಿ ಆಗಿದೆಯೆಂದು ಹೇಳುತ್ತೀರೋ?

ಶ್ರೀ ಎಚ್. ಎಸ್. ರುದ್ರಪ್ಪ,—1949-50ನೇ ಸಾಲಿನಿಂದಲೂ ಪ್ರತಿ ವರ್ಷವೂ ಸ್ಟಾಕ್ ವೆರಿಫಿಕೇಷನ್ ನಡೆಯುತ್ತಿದೆ. ಅದರಲ್ಲಿ ಅಮೋನಿಯಂ ನಲ್ಫೇಟ್, ಬೀಜಗಳು, ಮತ್ತು ಗೊಬ್ಬರಕ್ಕೆ ಬೇಕಾದ ರಸಾಯನಿಕ ವಸ್ತುಗಳು ಮುಂತಾದ ಯಾವ ಯಾವವನ್ನು ಮಾರಾಟಕ್ಕೆಂದು ಈ ಡಿಪೋನಲ್ಲಿಡುತ್ತಿದ್ದರೋ ಅವುಗಳನ್ನು ಪ್ರತಿವರ್ಷವೂ ಸ್ಟಾಕ್ ವೆರಿಫಿಕೇಷನ್ ಮಾಡಿದ್ದರಲ್ಲಿ ಸ್ಟಾಕ್ ಕಡಮೆ ಕಂಡು ಬರುತ್ತಿತ್ತು. ಆದರೆ 1955ನೇ ಇಸ್ವಿ ಸೆಪ್ಟೆಂಬರ್‌ನಿಂದ ಪ್ರೀ—ಆಡಿಟ್ ಬಂದ ಮೇಲೆ ಒಬ್ಬ ಎಫಿಷಿಯೆನ್ಸಿ ಆಡಿಟರ್ ಈ ಡಿಪೋ ಲೆಖ್ಖಗಳನ್ನು ತನಿಖೆ ಮಾಡಿ ಪೂರ್ತಿಯಾಗಿ ವೆರಿಫಿಕೇಷನ್ ಆದ ಮೇಲೆ ಇಷ್ಟು ದುಡ್ಡು ಷಾರ್ಟೇಜ್ ಬಂದಿದೆ. ಮಿಸ್-ಅಪ್ರೋಪ್ರಿಯೇಷನ್ ಇಷ್ಟಾಗಿದೆ ಎಂದು ಗೊತ್ತಾಯಿತು. 1949ನೇ ಸಾಲಿನಿಂದ ಇಲ್ಲಿಯವರೆಗೂ ಪ್ರತಿ ವರ್ಷದ ಲೆಖ್ಖಗಳನ್ನು ಚೆಕ್ ಮಾಡಿದ್ದೇವೆ. ಯಾವ ಯಾವ ಬಾಬುಗಳಲ್ಲಿ ಷಾರ್ಟೇಜ್ ಬಂದಿದೆ ಎಂಬುದಕ್ಕೆ ಅನೇಕ ಕಾರಣಗಳಿರಬಹುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಇನ್ನೆಷ್ಟು ವರ್ಷಗಳ ಆಡಿಟ್ ಇನ್ನೂ ಆಗಬೇಕಾಗಿದೆ?

ಶ್ರೀ ಎಚ್. ಎಸ್. ರುದ್ರಪ್ಪ.—ಈಗ 1949-50 ನೆ ಸಾಲಿನಿಂದ 1955-56ನೆ ಸಾಲಿನ ಲೆಖ್ಖಗಳು ತನಿಖೆಯಾಗಿವೆ.

ಶ್ರೀ ಜಿ. ಎಕ್. ಪುಟ್ಟಣ್ಣ.—ಹಾಗಾದರೆ ಈ ಡಿಪೋ ಲೆಖ್ಖಗಳು ಪ್ರತಿವರ್ಷವೂ ಸರಿಯಾಗಿ ಆಡಿಟ್ ಆಗಲಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಪ್ರತಿ ವರ್ಷವೂ ಆಡಿಟ್ ಆಗಿಲ್ಲ. ಆದ್ದರಿಂದ ಇಷ್ಟು ತೊಂದರೆಯಾಗಿದೆ. ಅದರೆ 1954ನೇ ಸಾಲಿನವರೆಗೂ ಲೆಖ್ಖಗಳು ವರ್ಷ ವರ್ಷವೂ ವೆರಿಫಿಕೇಷ್ಟ ಆಗಿವೆ.

ಶ್ರೀ ಜಿ. ಎಕ್. ಪುಟ್ಟಣ್ಣ.—ಹಾಗಾದರೆ ಅಲ್ಲಿಂದೀಚೆಗೆ ವೆರಿಫಿಕೇಷ್ಟ ನಿಂತಹಾಗೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವರ ಮೇಲೆ ಇಂತಹ ಜವಾಬ್ದಾರಿಯನ್ನು ಹೊರಿಸುವುದು ಬಹಳ ಕಷ್ಟವಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—(d)ಗೆ ಉತ್ತರವಾಗಿ ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರುಗಳಾದ ಶ್ರೀ ಜಿ. ಎಸ್. ರಂಗಸ್ವಾಮಿ ಅಯ್ಯಂಗಾರ್ ಮತ್ತು ಶ್ರೀ ಎಂ. ಚಿಕ್ಕ ಮಾದಯ್ಯನವರು ಡಿಪೋವಿನ ತಾಬೆಯಲ್ಲಿದ್ದರು ಎಂದು ಹೇಳಿದೆ. ಶ್ರೀಮಾನ್ ಚಿಕ್ಕಮಾದಯ್ಯನವರ ಹತ್ತಿರದ ಸಂಬಂಧಿ ಮೂರು ಸರ್ವಿಸ್ ಬಸ್ಸುಗಳನ್ನು ಇಟ್ಟುಕೊಂಡಿದ್ದಾರೆ. ಅವರು ಜಾಯಿಂಟ್ ಫ್ಯಾಮಿಲಿ ಮೆಂಬರ್ ಹಾಗಿದ್ದಪಕ್ಷದಲ್ಲಿ ಈ ದುಡ್ಡು ಎಲ್ಲಿ ಹೋಗಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲವೇ ?

Mr. SPEAKER.—That does not arise.

ಶ್ರೀ ಸಿ.ಕೆ. ರಾಜಯ್ಯಶೆಟ್ಟಿ.—ಸುಮಾರು 34,800 ರೂಪಾಯಿಗಳಷ್ಟು ಸಾಮಾಗ್ರಿಗಳು ಕಡಮೆಬಿದ್ದಿವೆ ಯೆಂದು ಹೇಳುತ್ತೀರಿ. ಹಾಗಿದ್ದಪಕ್ಷದಲ್ಲಿ ಎಷ್ಟು ವ್ಯಾಪಾರ ಮಾಡಿದ್ದಾರೆ ಎಂಬುದನ್ನು ತಿಳಿಸುವುದು ಕ್ಕಾಗುತ್ತದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—1949-50ನೆ ಸಾಲಿನಿಂದ ಸುಮಾರು 40 ಲಕ್ಷ ರೂಪಾಯಿಗಳಷ್ಟು ವ್ಯಾಪಾರ ನಡೆದಿದೆ. ಷಾರ್ಟೇಜ್ 1955ನೇ ಸಾಲಿನಿಂದೀಚೆಗೆ ಬಂದಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ತರಹ ಲುಕ್ಸಾನು ಇತರ ಜಿಲ್ಲೆಗಳಲ್ಲಿಯೂ ಆಗಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವು ಕಡೆಗಳಲ್ಲಿ ಆಗಿದೆ. ಇಷ್ಟು ಜಾಸ್ತಿ ಇಲ್ಲ.

ಶ್ರೀ ಸಿ. ಕೆ ರಾಜಯ್ಯಶೆಟ್ಟಿ.—ಅಷ್ಟು ಜಾಸ್ತಿ ಬಂದಿಲ್ಲ ಎಂದರೆ ಸುಮಾರು ಎಷ್ಟು ಬಂದಿದೆ ?

ಶ್ರೀ ಎಚ್. ಎಸ್. ರುದ್ರಪ್ಪ.—ಅದರಲ್ಲೇ ಇದೆ ಎಂದರೆ ಒಂದು ಪರ್ಸೆಂಟು ಷಾರ್ಟೇಜು ಇದೆ ಮಕ್ಕು ರೂಲ್‌ಸಿನ ಪ್ರಕಾರ ಇದೆಯೇ ಎಂಬುದನ್ನು ನೋಡಿ ಕೊಂಡು ಯಾರ ಮೇಲೆ ಜವಾಬ್ದಾರಿ ಹಾಕುತ್ತಾರೋ ಅದನ್ನು ನೋಡಬೇಕು.

ಶ್ರೀ ಎ. ಆರ್. ಬದರಿನಾರಾಯಣ್.—ಈಗ 1949-50ನೇ ಇಸವಿಯಿಂದ ಈ ವ್ಯವಹಾರ ನಡೆಯುತ್ತಿದೆ ಎಂದು ಹೇಳಿದಿರಿ ಮತ್ತು ಇದರಲ್ಲಿ ಸ್ವಲ್ಪ ಭಾಗ ನ್ಯಾಚುರಲ್ ಕಾನಸ್‌ಗಳಿಂದ ಬಂದಿದೆ ಎಂತಲೂ ಹೇಳಿದಿರಿ. ಆದರೆ ವರ್ಷೇ ವರ್ಷೇ ಆಡಿಟ್ಟು ಮಾಡುತ್ತಿರಲಿಲ್ಲವೇ ?

ಶ್ರೀ ಹೆಚ್. ಎಸ್. ರುದ್ರಪ್ಪ.—ಆಡಿಟ್ ಆಗಿಲ್ಲವೆಂದು ಆಗಲೇ ಹೇಳಿದ್ದೇನೆ.

ಶ್ರೀ ಎ. ಆರ್. ಬದರಿನಾರಾಯಣ್.—ಅದನ್ನು ಆಡಿಟ್ಟು ಮಾಡದೆ ಇರಲು ಕಾರಣವೇನು ?

ಶ್ರೀ ಹೆಚ್. ಎಸ್. ರುದ್ರಪ್ಪ.—ಕಾರಣ ನನಗೆ ಗೊತ್ತಿಲ್ಲ. ತಿಳಿದು ಹೇಳುತ್ತೇನೆ.

Sri G. VENKATAI GOWDA.—When did the Government actually notice the shortage ?

Sri H. S. RUDRAPPA.—This shortage was noticed in the month of September 1955. When a complaint was received in the month of September, an efficiency audit officer was posted to investigate the matter. He took three or four months to verify and he reported last year. Then we called for the explanation of the officer concerned for the shortage.

Sri G. VENKATAI GOWDA.—Is there not a stock verification register maintained for each of the articles each year ?

Sri H. S. RUDRAPPA.—There is stock verification and the shortage in each article in each year is noted.

ಶ್ರೀ ಸಿ. ಎಸ್. ಹುಲ್‌ಕೋಟಿ.—ಈ ಲಾಸಿನ ಪರ್ಸೆಂಟೇಜು ಎಷ್ಟಾಗುತ್ತದೆ ?

ಶ್ರೀ ಹೆಚ್. ಎಸ್. ರುದ್ರಪ್ಪ.—ಅದನ್ನು ಲೆಕ್ಕ ಹಾಕಿ ನೋಡಿಲ್ಲ. ರೂಲ್ಸ್ ಪ್ರಕಾರ ಎಷ್ಟು ತೆಗೆದುಬೇಕು ಎನ್ನುವುದರ ಲೆಕ್ಕ ಇನ್ನೂ ಸಿಕ್ಕಿಲ್ಲ.

ಶ್ರೀ ಜಿ. ದುಗ್ಗಪ್ಪ.—52ನೇ ಸಾಲಿನಿಂದ ನಡೆಯುತ್ತಿರುವ ಈ ವ್ಯವಹಾರದ ಮೊಬಲಗೆಷ್ಟು ?

ಶ್ರೀ ಹೆಚ್. ಎಸ್. ರುದ್ರಪ್ಪ.—ನಲವತ್ತು ಲಕ್ಷ ರೂಪಾಯಿಗಳ ವ್ಯವಹಾರ.

ಶ್ರೀ ಜಿ. ದುಗ್ಗಪ್ಪ.—ಇದನ್ನು ತನಿಖೆ ಮಾಡಲು ನೇಮಿಸಿರುವ ಅಧಿಕಾರಿಗಳಾರು ?

ಶ್ರೀ ಹೆಚ್. ಎಸ್. ರುದ್ರಪ್ಪ.—ಎಫಿಷಿಯೆನ್ಸಿ ಆಡಿಟ್ಟು ಆಫೀಸರು.

ಶ್ರೀ ಜಿ. ದುಗ್ಗಪ್ಪ.—ಅವರು ರಿಪೋರ್ಟು ಕಳುಹಿಸಿಲ್ಲವೇ ?

ಶ್ರೀ ಹೆಚ್. ಎಸ್. ರುದ್ರಪ್ಪ.—1956ನೇ ಸಾಲಿನಲ್ಲಿ ಕಳುಹಿಸಿಲ್ಲ. ಅಲ್ಲಿಂದೀಚೆಗೆ ಈ ಇಲಾಖೆಯವರು ಪ್ರತಿಯೊಂದು ಐಟಮ್ಮಿಗೂ ವಿವರಗಳನ್ನು ಕೇಳುತ್ತಿದ್ದಾರೆ. ಆದ್ದರಿಂದ ಇದನ್ನು ತೆಗೆಯುವುದು ಸ್ವಲ್ಪ ಕಷ್ಟವಾಗಿದೆ.

ಶ್ರೀ ಜಿ. ದುಗ್ಗಪ್ಪ.—ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇನ್ನೂ ಅಧಿಕಾರದಲ್ಲದ್ದಾರೆಯೋ ಅಥವಾ ಅವರನ್ನು ನಸ್ಪೆಂಡು ಮಾಡಿದ್ದೀರೋ ತಿಳಿಸುವಿರಾ ?

ಶ್ರೀ ಹೆಚ್. ಎಸ್. ರುದ್ರಪ್ಪ.—ಅಧಿಕಾರದಲ್ಲದ್ದಾರೆ. ಈ ಸಂದರ್ಭದಲ್ಲಿ ಹಣ ದುರುಪಯೋಗವಾಗಿದೆ ಎಂದು ನಿರ್ದಿಷ್ಟವಾಗಿ ತಿಳಿಯುವವರೆಗೆ ಅಧಿಕಾರಿಗಳನ್ನು ನಸ್ಪೆಂಡು ಮಾಡುವುದಕ್ಕೆ ಅವಕಾಶವೇ ಇರುವುದಿಲ್ಲ.

Persons punished under Article 14 of the Kolar Gold Mining Undertakings (Acquisition) Act, 1956.

Q.—505. Sri C. M. ARUMUGHAM (Kolar Gold Fields).—

Will the Government be pleased to state :—

the number of persons who were punished under Section 14 of the Kolar